ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಮಂತ್ರಿಗಳು).—

ಅ) ರೂ.೪೬೦–೭೭ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ೧೯೮೫–೮೬ ರಿಂದ ಡಿಸೆಂಬರ್ ೧೯೮೮ರವರೆಗೆ ೨೫.೩೩ ಕೋಟಿ ಸಸಿಗಳನ್ನು ಬೆಳಸಲಾಗಿದೆ.

ಇ) ೧೯೮೫–೮೬ — ೮೫೦ ಲಕ್ಷ
೧೯೮೬–೮೭ — ೭೩೨ ಲಕ್ಷ
೧೯೮೭–೮೮ — ೪೯೦ ಲಕ್ಷ
ಒಟ್ಟು ೨೦೭೨ ಲಕ್ಷ

ಈ) ಸಾಮಾನ್ಯವಾಗಿ ಶೇಕಡ ೬೦ರಿಂದ೭೦ ರಷ್ಟು

ಕೊಡಗು ಜಿಲ್ಲೆಯಲ್ಲಿ ಮರಗಳ ತೊಗಟೆಗಳು ಕಳ್ಳಸಾಗಾಣಿಕೆ

೩೫೦ (೫೦೦) ಶ್ರೀ ಡಿ. ಎ. ಚಿನ್ನಪ್ಪ (ಪೊಡಿಕೇರಿ).—ಮಾನ್ಯ ಕೃಷಿ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೊಡಗು ಜಿಲ್ಲೆಯಲ್ಲಿ ಮರಗಳ ತೊಗಟೆಗಳು ಕಳ್ಳಸಾಗಾಣಿಕೆಯಾಗುತ್ತಿರುವುದು ನಿಜ ಸಂಗತಿಯಾಗಿದೆಯೇ ?

ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮೊಕದ್ದಮೆಗಳನ್ನು ಪತ್ತೆ ಹಚ್ಚಲಾಗಿದೆ ? ಮತ್ತು ಎಷ್ಟು ವಾಹನಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ ?

ಇ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಪ್ರಮಾಣದ ತೊಗಟೆಯನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ. (ಜಿಲ್ಲಾವಾರು ಮಾಹಿತಿ ನೀಡುವುದು).

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಮಂತ್ರಿಗಳು).—

ಅ) ಹೌದು.

ಆ) ವರ್ಷವಾರು ಮಾಹಿತಿಯು ಈ ಕೆಳಕಂಡಂತಿದೆ :—

ವರ್ಷ	ಮೊಕದ್ದಮೆ ಕೊಡಗು ಜಿಲ್ಲೆ	ಅಮಾನತ್ತು ಪಡಿಸಿದ ವಾಹನಗಳ ಸಂಖ್ಯೆ
೧೯೮೬–೮೭	೯	೮
೧೯೮೭–೮೮	೨೩	೬
೧೯೮೮–೮೯	೪೭	೨೫
ಒಟ್ಟು	೭೯	೩೯

೫)	ಜಿಲ್ಲೆ	೧೯೮೬–೮೭	೧೯೮೭–೮೮	೧೯೮೮–೮೯
		(ಕೆ. ಜಿ. ಯಲ್ಲಿ)	(ಕೆ. ಜಿ. ಯಲ್ಲಿ)	(ಕೆ. ಜಿ. ಯಲ್ಲಿ)
೧)	ಕೊಡಗು	೬,೮೫೦	೨೯,೧೪೦	೧,೧೮,೧೮೮
೨)	ದಕ್ಷಿಣ ಕನ್ನಡ	—	೨೮,೫೮೫	೨೯,೭೮೦
೩)	ಹಾಸನ	೧೦,೬೨೫	೯,೦೦೦	೨೯,೮೨೫
೪)	ಶಿವಮೊಗ್ಗ	೨೪,೩೩೫	೪,೨೫೦	೩೭೫
೫)	ಬೆಂಗಳೂರು	—	೬,೮೨೫	—
	(ನಗರ)	—	—	—
೬)	ಉತ್ತರ ಕನ್ನಡ	—	೫,೨೫೦	೫೭೫
	ಒಟ್ಟು	೪೧,೮೧೦	೮೩,೦೫೦	೧,೭೮,೭೪೩

ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿಕೆ

(೧) ಸಿಂಧಗಿ ಪೋಲೀಸ್ ಠಾಣೆಯಲ್ಲಿ ಪತ್ರಕರ್ತರೊಬ್ಬರನ್ನು ಅಕ್ರಮವಾಗಿ ಬಂಧನದಲ್ಲಿಟ್ಟಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ಇವತ್ತು ನಿಲುವಳಿ ಸೂಚನೆ ಮೂಲಕ ಒಂದು ಪ್ರಾಮುಖ್ಯವಾದ ವಿಷಯ ತಂದಿದ್ದೇನೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕೂಡ್ರಿ. ಇವತ್ತು ೫ ನಿಲುವಳಿ ಸೂಚನೆ ಬಂದಿವೆ. ಒಂದು, ಶ್ರೀ ಯು. ಭೂಪತಿ, ಶ್ರೀ ಬಿ. ಗುರುಪ್ರಸಾದ್, ಶ್ರೀ ಎನ್. ಎಸ್. ಖೇಡ್, ಶ್ರೀ ಎಂ. ಎಸ್. ಕೃಷ್ಣನ್, ಶ್ರೀ ಆರ್. ವೆಂಕಟರಾಮಯ್ಯ, ಶ್ರೀ ಬಿ. ಬಸವಲಿಂಗಪ್ಪ, ಶ್ರೀ ಬಿ. ಎಸ್. ಯಡಿಯೂರಪ್ಪ, ಶ್ರೀ ಎಂ. ಎಸ್. ನಾರಾಯಣರಾವ್, ಶ್ರೀ ಕೆ. ಹೆಚ್. ಶ್ರೀನಿವಾಸ್ ಇವರು ಏನು ಹೇಳಿದ್ದಾರೆಂದರೆ, 'illegal detention of journalist Sri Chandrashekara Thanduru Editor of Varada Rajakeeya by the Police Sub–Inspector, Sindhagi police Station'. ಎರಡನೆಯದು, ಆರ್. ವೆಂಕಟರಾಮಯ್ಯನವರು ಯಾವುದರ ಬಗ್ಗೆ ಕೊಟ್ಟಿದ್ದಾರೆ ಎಂದರೆ, 'Regarding the close–down of 13 textile mills and nearly 13,500 workers of the textile mills in Karnataka are thrown out of job.

(ಗೊಂದಲ)

ಮೂರನೆಯದು, ಶ್ರೀಮಾನ್ ಖಿರ್ಗೆಯವರು, ಕಾಂಗ್ರೆಸ್ ಪಕ್ಷ ಹಾಗೂ ರಾಷ್ಟ್ರೀಯ ನಾಯಕತ್ವವನ್ನು ಕೊಲೆಗಡುಕರ ಪಕ್ಷ ಎಂದು ಮುಖ್ಯಮಂತ್ರಿಗಳು ಹೇಳಿಕೆ ನೀಡಿರುವ ಬಗ್ಗೆ, ನಾಲ್ಕನೆಯದು, ಯಡಿಯೂರಪ್ಪನವರು ಜಮಖಂಡಿ ತಾಲ್ಲೂಕಿನ ಸಾವಳಗಿ ಗ್ರಾಮದಲ್ಲಿ ಉದ್ರಿಕ್ತ ಗ್ರಾಮಸ್ಥರ ಮೇಲೆ ನಡೆದಿರುವ ಗೋಲಿಬಾರ್ ಬಗ್ಗೆ, ಐದನೆಯದು ಶ್ರೀ ಎಂ. ಎಸ್. ಕೃಷ್ಣನ್, ಅವರು ಕಾಗದ ಬರೆದು, ನಿಲುವಳಿ ಸೂಚನೆ ಆಗದಿದ್ದರೆ ನಿಯಮ ೬೮ರ ಪ್ರಕಾರವಾದರೂ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದಿದ್ದಾರೆ. ಈಗ ಮೊನ್ನೆ ಬಿ.ಎ.ಸಿ. ಯಲ್ಲಿ ಆಗಿರುವ ತೀರ್ಮಾನದ ಪ್ರಕಾರ ಇವತ್ತಿನ ದಿವಸ ವೋಟ್ ಇನ್ ಅಕೌಂಟ್ ತೆಗೆದುಕೊಂಡು ಬಿಡುವುದು. ನಾಳೆಯಿಂದ ಮುಂದಿನ ೪ ದಿನಗಳಲ್ಲಿ ಇವುಗಳ